ತಾಲ್ಲೂಕು.	ಪಸಾರೇ ಜಿನಸು.	ತಾರೀಖು.	ಸ್ಥಳ.
ತಿಪಟೂರು.	ಬೆನ್ನಾಯಕನಹಳ್ಳಿ, ಈರ್ಲಗೆರೆ, ಚಿಕ್ಕಮಾರ್ಪನ ಹಳ್ಳಿ, ಕಡೇಹಳ್ಳಿ, ಕಾವಲ್, ಕೆಂಚಮಾರನಹಳ್ಳಿ, ಆದಿನಾಯಕನಹಳ್ಳಿ, ಲಕ್ಷ್ಮೀಪುರ ಈ ಗ್ರಾಮಗಳಲ್ಲಿರತಕ್ಕ ಅಳಲೇಕಾಯಿ. ಬೀದರೆಗುಡಿ, ಲಕ್ಕಿಹಳ್ಳಿ ಕಾವಲ್, ಹೊಂಗೆಲಕ್ಷ್ಮೀ ಕಾವಲ್, ಈಚನೂರ್ ಕಾವಲ್, ಹಾಲ್ಕುರಿಕೆ ಕಾವಲ್‌ಗಳಲ್ಲಿರುವ, 1 ತಾರೆಕಾಯಿ 2 ದಿಂಡಗದ ಗೋಂದು 3 ಕಪಿಲಾರಂಗು 4 ಹೊಂಗೇಬೀಜ 5 ತಂಗಡಿವ್ಯಾಣ 6 ಬ್ಯಾಲದಕಾಯಿ 7 ಪತಂಗ	1896ನೇ ಸೆಪ್ಟಂಬರ್ 5ನೇ ತಾರೀಖು.	ತಿಪಟೂರು.
ಪಾವಗಡ.	1 ಜೇನುತುಪ್ಪ 2 ಕಲ್ಲುಹುವ್ವೆ 3 ಅಳಲೇಕಾಯಿ 4 ತಗರಸಬೀಜ 5 ಮಡ್ಡಿಚಕ್ಕೆ 6 ಶೀತಾಫಲ	1896ನೇ ಸೆಪ್ಟಂಬರ್ 8ನೇ ತಾರೀಖು.	ಪಾವಗಡ.

2. ಚಡದರಖಾಸ್ತುದಾರನು ಹರಾಜು ಖೈದಾದ ಕೂಡ್ಲೆ ಹರಾಜು ಮೊಬಲಗು ಪೈಕಿ ಶೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನ ಠೇವಣಿ ಕಟ್ಟುತಕ್ಕದ್ದು. ಬಾಕಿ ಮೊಬಲಗು ಹರಾಜು ಮುಂಜೂರ್ಮಾಡಲ್ಪಟ್ಟ ಸಂಗತಿ ಆಮಲ್‌ದಾರ್ರಿಂದ ಚಡಪವಾಲ್‌ದಾರ್ರಿಗೆ ತಿಳಿಸಲ್ಪಟ್ಟ ತಾರೀಖು ಮೊದಲು 15 ದಿವಸಗಳ ವಳಗಾಗಿ ಪಾವತಿ ಮಾಡತಕ್ಕದ್ದು. ಪೂರಾ ಹರಾಜು ಮೊಬಲಗಿಗೆ ರೂಪಾಯಿ 1ಕ್ಕೆ 1 ಆಣೆಯಂತೆ ಲೋಕಲ್‌ಸೆಸ್ ವಸೂಲ್ಮಾಡಲ್ಪಡುವದು.

3. ಕಿಪ್ತ ಕಾಲದ ವಳಗೆ ಹಣ ಪಾವತಿ ಮಾಡದೆ ತಪ್ಪಿದರೆ ದರಖಾಸ್ತುದಾರರು ಠೇವಣಾತಿ ಇಟ್ಟ ಮೊಬಲಗು ಸರಕಾರಕ್ಕೆ ಶೇರಿಸಿಕೊಳ್ಳಲ್ಪಡುವದಲ್ಲದೆ ಹರಾಜಿನಲ್ಲಿ ಪಡದ ಹಕ್ಕನ್ನ ದರಖಾಸ್ತುದಾರನ ಲುಕ್ಸಾನಿಗೆ ವಳಪಡಿಸಿ ಪುನಹ ಹರಾಜು ಮಾಡಲ್ಪಡುವದು. ಆದರೆ ದುಸರೇ ಹರಾಜಿನಲ್ಲಿ ಪುಂಟುಗುವ ಫಾಯಿದೆ ಭಾಗ ದರಖಾಸ್ತುದಾರರು ಹೊಂಚಲು ಅರ್ಹರಾಗುವದಿಲ್ಲ.

4. ಇಜಾರೆದಾರನು ಹಿಡುವಳಿ ಜಮೀನುಗಳಲ್ಲಿರತಕ್ಕ ಮರಗಳ ಮತ್ತು ಸ್ವಂತ ಅನುರಾಯಿಗಳಲ್ಲಿ ದೊರೆಯುವಫಸಲನ್ನ ರೂಢಿಸಕೂಡದು.

5. ಗ್ರಾಮ ಅನುರಾಯಿ ಫಲ ಹುಟ್ಟುವಳಿಗಳು ಮೇಲ್ಕಂಡ ಪಸಾರೆ ಜಿನಸಿಗಳಲ್ಲಿ ಅಡಗಿರುವದಿಲ್ಲ.

ಎಂ. ನಾರಾಯಣರಾವ್, ಡೆಪ್ಯೂಟಿ ಕಮ್ಮಿಷನರ್.

ತುಮಕೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಡಿಪಾರ್ಟ್‌ಮೆಂಟ್.

ತಾರೀಖು 29ನೇ ಜುಲೈ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ತುಮಕೂರು ಡಿಸ್ಟ್ರಿಕ್ಟಿನಲ್ಲಿರುವ ಬುಕ್ಕಾಪಟ್ಣ, ಮಂಚಲುದೊರೆ, ತೀರ್ಥರಾಂಪುರ ಫಾರೆಸ್ಟ್ಸುಗಳ ಬಾಬತು ಅರಗಿನ ಕಂಟ್ರಾಕ್ಟು 1896—97ನೇ ಸಾಲ ಅಂದರೆ 1896ನೇ ಇಸವಿ ಜುಲೈ ಗುರ್ರೇ ಲಾಗಾಯತು 1897ನೇ ಇಸವಿ ಜೂರ್ ಆಖೈರುವರಿಗೆ ಜಮಾಯಿಸಿಕೊಳ್ಳುವ ಹಕ್ಕು ತುಮಕೂರ್ ಡಿಸ್ಟ್ರಿಕ್ಟು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರು ಅಥವಾ ಅವರಿಂದ ನೇಮಿಸಲ್ಪಡುವ ಸಬ್ ಅಸಿಸ್ಟೆಂಟ್ ಕಂಸರ್‌ವೇಟರ್ ರೂಬರೂ 1896ನೇ ಇಸವಿ ಸೆಪ್ಟಂಬರ್ ತಾರೀಖು 4ರಲ್ಲು ಬಹಿರಂಗವಾಗಿ ತುಮಕೂರ್ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸಿನಲ್ಲಿ ಹರಾಜುಮಾಡಲ್ಪಡುತ್ತೆ.

2. ಚಡಸವಾಲ್‌ದಾರನು ಹರಾಜು ಕೈದಾದ ಕೂಡ್ಲೆ ಹರಾಜು ಮೊಬಲಗು ಪೈಕಿ ಕಾಲು ಹಿಸ್ಸೆ ಮೊಬಲಗು ಠೇವಣಿ ಕಟ್ಟುತಕ್ಕದ್ದು. ಬಾಕಿ ಮೊಬಲಗು ಹರಾಜು ಮುಂಜೂರ್ಮಾಡಲ್ಪಟ್ಟ ಸಂಗತಿ ತಿಳಿಸಲ್ಪಟ್ಟ ತಾರೀಖು ಲಾಗಾಯತು ಹದಿನೈದು ದಿವಸದವಳಗಾಗಿ ಪಾವತಿ ಮಾಡತಕ್ಕದ್ದು, ಪೂರಾ ಹರಾಜು ಮೊಬಲಗ್ಗೆ ರೂಪಾಯಿ ಬಂದಕ್ಕೆ ಬಂದಾಣೆಯಂತೆ ಲೋಕಲ್ ಸೆಸ್ಸು ವಸೂಲ್ಮಾಡಲ್ಪಡುವದು.

3. ಖಿಸ್ತು ಮೊಬಲಗು ಗೊತ್ತಾದ ಕಾಲದವಳಗಾಗಿ ಪಾವತಿ ಮಾಡದೆ ಹೋದರೆ ಚಡಸವಾಲ್‌ದಾರನ ಠೇವಣಿ ಮೊಬಲಗು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುವದಲ್ಲದೆ ಹರಾಜಿನಲ್ಲಿ ಪಡದ ಹಕ್ಕನ್ನು ಆವಲ್ ಇಜಾರೆದಾರನ್ನ ಲುಕ್ಸಾನಿಗೆ ವಳಪಡಿಸಿ ಪುನಹ ಹರಾಜು ಮಾಡಲ್ಪಡುವದು. ಆದರೆ ದುಸರೇ ಹರಾಜಿನಲ್ಲಿ ಉಂಟಾಗುವ ಫಾಯಿದೆ ಭಾಗ ಅವಲ್ ಇಜಾರೆದಾರನು ಹೊಂದಲು ಅರ್ಹನಾಗುವದಿಲ್ಲ

4. ಹರಾಜು ಮುಂಜೂರಾದ ಕೂಡ್ಲೆ ಇಜಾರೆದಾರನು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರ ಹೆಸರಿಗೆ ಛಾಪಾ ಕಾಗದದಲ್ಲಿ ಮುಚ್ಚಳಿಕೆಯನ್ನು ಬರದುಕೊಡಬೇಕು. ಈ ಮುಚ್ಚಳಿಕೇ ಷರತ್ತುಗಳು ಹರಾಜುಕಾಲದಲ್ಲಿ ತಿಳಿಸಲ್ಪಡುತ್ತವೆ.

ತಾರೀಖು 29ನೇ ಜುಲೈ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ತುಮಕೂರ್ ಡಿಸ್ಟ್ರಿಕ್ಟಿನಲ್ಲಿರುವ ದೇವರಾಯದುರ್ಗ, "ಮದ್ದಗಿರಿ, ಕುದರೆಕಣಿವೆ, ಹುಲಿಯೂರುದುರ್ಗ, ಕಂಪ್ಲಾಪುರ, ಬುಕ್ಕಾಪಟ್ಣ, ಮಂಚಲುದೊರೆ, ತೀರ್ಥರಾಂಪುರ ಸ್ಪೇಟ್ ಫಾರೆಸ್ಟುಗಳಲ್ಲಿರತಕ್ಕ ಕಲ್ಲು ಹುವ್ವೆ 1896—97ನೇ ಸಾಲ್ ಅಂದರೆ 1896ನೇ ಇಸವಿ ಜುಲೈ ಗುರ್ರೇ ಲಾಗಾಯತು 1897ನೇ ಇಸವಿ ಜೂರ್ ಆಖೈರು ಪರ್ಯಂತರ ಜಮಾಯಿಸಿಕೊಳ್ಳುವ ಹಕ್ಕು ತುಮಕೂರ್ ಡಿಸ್ಟ್ರಿಕ್ಟು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಂದ 1896ನೇ ಇಸವಿ ಸೆಪ್ಟಂಬರ್ ತಾರೀಖು 4ರಲ್ಲು ಬಹಿರಂಗವಾಗಿ ತುಮಕೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸಿನಲ್ಲಿ ಹರಾಜುಮಾಡಲ್ಪಡುತ್ತೆ.

2. ಚಡಸವಾಲ್‌ದಾರನು ಹರಾಜು ಖೈದಾದ ಕೂಡ್ಲೆ ಹರಾಜು ಮೊಬಲಗು ಪೈಕಿ ಕಾಲುಹಿಸ್ಸೆ ಮೊಬಲಗು ಠೇವಣಿ ಕಟ್ಟುತಕ್ಕದ್ದು. ಬಾಕಿ ಮೊಬಲಗು ಹರಾಜು ಮುಂಜೂರ್ಮಾಡಲ್ಪಟ್ಟ ಸಂಗತಿ ತಿಳಿಸಲ್ಪಟ್ಟ ತಾರೀಖು ಲಾಗಾಯತು ಹದಿನೈದು ದಿವಸದವಳಗಾಗಿ ಪಾವತಿ ಮಾಡತಕ್ಕದ್ದು. ಪೂರಾ ಹರಾಜು ಮೊಬಲಗಿಗೆ ರೂಪಾಯಿ ಬಂದಕ್ಕೆ ಬಂದಾಣೆಯಂತೆ ಲೋಕಲ್ ಸೆಸ್ಸು ವಸೂಲ್ಮಾಡುವದು.

3. ಖಿಸ್ತು ಮೊಬಲಗು ಗೊತ್ತಾದ ಕಾಲದವಳಗಾಗಿ ಹಾಜರ್ಮಾಡದೆ ಹೋದರೆ ಚಡಸವಾಲ್‌ದಾರನ ಠೇವಣಿ ಮೊಬಲಗು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುವದಲ್ಲದೆ ಹರಾಜಿನಲ್ಲಿ ಪಡದ ಹಕ್ಕನ್ನು ಅವಲ್ ಇಜಾರ್‌ದಾರನ್ನ ಲುಕ್ಸಾನಿಗೆ ವಳಪಡಿಸಿ ಪುನಹ ಹರಾಜು ಮಾಡಲ್ಪಡುವದು. ಆಗರೆ ದುಸರೇ ಹರಾಜಿನಲ್ಲಿ ಉಂಟುಗುವ ಫಾಯಿದೆ ಭಾಗ ಅವಲ್ ಇಜಾರೆದಾರನು ಹೊಂದಲು ಅರ್ಹನಾಗುವದಿಲ್ಲ.

ಎಂ. ವೆಂಕಟನಾರಣಪ್ಪ, ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್.